ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು

O.S. No. 473/2018. PW 1.

ದಿನಾಂಕ:**27.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿಗಳ ಪರ ಶ್ರೀ ಯು ಎಸ್ ವಕೀಲರಿಂದ:-

ನನ್ನ ಮತ್ತು ಗಂಗಾಧರಯ್ಯ ನಡುವೆ ಯಾವುದೇ ದ್ವೇಷವಿಲ್ಲವೆಂದರೆ ಸರಿ. ದಾವಾ ಸರ್ವೆ ನಂ.25 ರಲ್ಲಿ ಒಟ್ಟು ಎಷ್ಟು ಜನರಿಗೆ ಖಾತೆ ಇದೆ ಎಂದು ನನಗೆ ಗೊತ್ತಿಲ್ಲ. ಹಾಲಯ್ಯ ರವರಿಗೆ ಪ್ರತಿವಾದಿ 1 ರಿಂದ 4 ರವರನ್ನು ಒಳಗೊಂಡಂತೆ ಮತ್ತು ಆಶೋಕ್ ಮತ್ತು ರುದ್ರಯ್ಯರವರು ಮಕ್ಕಳು ಎಂದರೆ ಸಾಕ್ಷಿಯು ಸದರಿಯವರಿಗೆ ನನಗೆ ತಿಳಿದಿರುವಂತೆ ಪ್ರತಿವಾದಿ 1 ಮತ್ತು 2 ಮಾತ್ರ ಅವರ ಮಕ್ಕಳು ಎನ್ನುತ್ತಾರೆ. ನಿಪಿ2 ರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿದವರೆಂದರೆ ಚಂದ್ರಯ್ಯ, ಬಿ ಸಿ ಚಂದ್ರಪ್ಪ, ಬಿಕಲಂದಾರರಾದ ಚಿಕ್ಕವೀರಪ್ಪ. ಸದರಿಯವರೆಲ್ಲರು ಮರಣಹೊಂದಿರುತ್ತಾರೆ.

ನನ್ನ ತಂದೆ ಸದರಿ ಜಮೀನು ನನಗೆ ಸೇರಬೇಕು ಎಂದು ಯಾವುದೇ ವಿಲ್ ಬರೆದಿಲ್ಲ. ನನ್ನ ತಂದೆಯ ಹೆಸರಿಗೆ ಆಗಿದ್ದ ಕ್ರಯಪತ್ರದಂತೆ ಖಾತೆಯಾಗಿಲ್ಲ ಎಂದು ದಾವೆ ಹೂಡಿದ್ದೇವೆ. ಸರ್ವೆ ನಂ.127/3 ರ ಜಮೀನು ಕೂಡು ಬೆಲಗೂರಿನಲ್ಲಿ ಇದೆ ಎಂದರೆ ಸರಿ. ಅದೇ ರೀತಿ ಚಿನಕರಹಳ್ಳಿ ಗ್ರಾಮದಲ್ಲಿಯೂ ಕೂಡ ಸರ್ವೆ ನಂ.24 ಮತ್ತು 26 ರಲ್ಲಿ ನಮಗೆ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.25 ರಲ್ಲಿ ಇದೆ ಎನ್ನುತ್ತಾರೆ.

ಗಂಗಾಧರಯ್ಯ ರವರಿಗೂ ಕೂಡ ಸರ್ವೆ ನಂ.24 ಮತ್ತು 25 ರ ಜಮೀನು ಇಲ್ಲ. ಸಾಕ್ಷಿ ಮುಂದುವರೆದು ಅವರಿಗೂ ಸರ್ವೆ ನಂ.25 ರಲ್ಲಿ ಇದೆ ಎನ್ನುತ್ತಾರೆ. ಹಾಲಯ್ಯ ರವರಿಗೆ ತಮ್ಮ ಪಿತ್ರಾರ್ಜಿತ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯವರೇ ಸ್ವಾಧೀನದಲ್ಲಿ ಇದ್ದರು ಎನ್ನುತ್ತಾರೆ.

ಬೆಲಗೂರಿನಲ್ಲಿನ ಜಮೀನನ್ನು ನನ್ನ ತಂದೆ ಮತ್ತು ಗಂಗಾಧರಯ್ಯ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ವಿಭಾಗದಲ್ಲಿ ದಾವಾ ಸ್ವತ್ತನ್ನು ಸೇರಿಸಿದ್ದೆವು. ವಿಭಾಗ ಪತ್ರವನ್ನು ಹಾಜರುಪಡಿಸಲು ಸಾದ್ಯವಿಲ್ಲ.

ನನ್ನ ಮೃತಪಟ್ಟ ದಿನಾಂಕವನ್ನು ನನ್ನ ದಾವೆ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲವೆಂದರೆ ಸರಿ. ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲದಿದ್ದರು ಸಹ: ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ:ದ:ನ್ಯಾ:ದಂ.,ರವರು, ಕಡೂರು.